■ ಬಿಂದು

## ಓಡಿ ಹೋದವನು!




ಪಾಕಿಸ್ತಾನ ವರ್ಸಸ್ ಇಂಗ್ಲೆಂಡ್ ಕ್ರಿಕೆಟ್ ಪಂದ್ಯದಲ್ಲಿ ಸ್ಪಾಟ್ ಫಿಕ್ಸಿಂಗ್‌ನಲ್ಲಿ ಭಾಗಿಯಾದ ಮೂವರು (ಅಮೀರ್, ಆಸಿಫ್, ಸಲ್ಮಾನ್) ಕ್ರಿಕೆಟಿಗರ ಬಗ್ಗೆ 'ನ್ಯೂಸ್ ಆಫ್ ದಿ ವರ್ಲ್ಡ್' ಪತ್ರಿಕೆಗೆ ಸಂದರ್ಶನ ನೀಡಿದ ವಿಕೆಟ್ ಕೀಪರ್ ಜುಲ್ಫರ್‌ನೈನ್ ಇದೀಗ ದೇಶಾಂತರ ಓಡಿ ಹೋಗಿದ್ದಾನೆ. ದಕ್ಷಿಣ ಆಫ್ರಿಕಾ ವಿರುದ್ಧ ಪಾಕಿಸ್ತಾನ ತಂಡದ ಒಂದು ದಿನದ ಪಂದ್ಯದಲ್ಲಿ ಭಾಗವಹಿಸಲು ದುಬೈಗೆ ಬಂದಿದ್ದ ಜುಲ್ಫರ್‌ನೈನ್ ರಾತೋ ರಾತ್ರಿ ಲಂಡನ್ನಿಗೆ ಪರಾರಿಯಾಗಿದ್ದಾನೆ.

ಜುಲ್ಫರ್‌ನೈನ್‌ಗೆ ಬುಕ್ಕಿಗಳು ಮೂರು 'ಆಫರ್' ಕೊಟ್ಟರಂತೆ! – 'ಆಫ್ರಿಕಾ ವಿರುದ್ಧದ ಪಂದ್ಯ ಫಿಕ್ಸಿಂಗ್ ಮಾಡಲು ನೆರವಾಗು, ಕೋಟಿಗಟ್ಟಳೆ ಡಾಲರ್ ಕಿಸೆಗಿಳಿಸು; ಇದಕ್ಕೆ ಒಪ್ಪದಿದ್ದರೆ ಮುಂದಿನ ಪಂದ್ಯದಲ್ಲಿ ನೀನು ತಂಡದಲ್ಲಿ ಸ್ಥಾನ ಪಡೆಯೋದಿಲ್ಲ. ಹಾಗೆಯೇ ವಾಪಸ್ ಪಾಕಿಸ್ತಾನಕ್ಕೆ ಹೋದ ಮೇಲೆ ನೀನು ಜೀವ ಸಹಿತ ಉಳಿಯೋದಿಲ್ಲ' ಎನ್ನುವುದು ಬುಕ್ಕಿಗಳು ನೀಡಿದ ಮೂರು ಆಯ್ಕೆಗಳಂತೆ! ಒಡಪಾಯಿ ಜುಲ್ಫರ್‌ನೈನ್ ಪರಾರಿಯಾಗದೆ ಇನ್ನೇನು ಮಾಡಿಯಾನು?

ಅಂದ ಹಾಗೆ, ಜುಲ್ಫರ್‌ನೈನ್ ನ್ಯೂಸ್ ಆಫ್ ದಿ ವರ್ಲ್ಡ್‌ಗೆ ಸಂದರ್ಶನ ನೀಡಿದರೆ 50 ಸಾವಿರ ಪೌಂಡ್ ನೀಡುವುದಾಗಿ ಪತ್ರಿಕೆ ಹೇಳಿತ್ತಂತೆ. 'ಆ ಹಣ ನಾನು ತಗೊಂಡಿಲ್ಲ. ಚಾರಿಟಿಗೆ ದಾನ ಮಾಡಿ ಎಂದಿದ್ದೇನೆ' ಎನ್ನುವುದು ಜುಲ್ಫರ್‌ನೈನ್ ಹೇಳಿಕೆ. ಹಣ ಏನಾಯ್ತು ಎಂಬ ಬಗ್ಗೆ ಪತ್ರಿಕೆ ಬಾಯಿ ಬಿಟ್ಟಿಲ್ಲ! ಕ್ರಿಕೆಟ್ ಅಂದರೆ ಸಾಮಾನ್ಯವೇ..? ಕುಂತರೂ, ನಿಂತರೂ, ಮಾತನಾಡಿದರೂ, ಕೊನೆಗೆ ದೇಶ ಬಿಟ್ಟು ಓಡಿದರೂ.. ದುಡ್ಡೇ ದುಡ್ಡು!

## ನವೋಮಿಯ 'ಐ ಡೂ..'



'ವಿವಾದಗಳ ಮಹಾರಾಣಿ' ಸೂಪರ್ ಮಾಡೆಲ್ ನವೋಮಿ ಕ್ಯಾಂಪ್‌ಬೆಲ್‌ಗೆ ಕೊನೆಗೂ ಕಂಕಣಭಾಗ್ಯ ಬಂದಿದೆ. 40ರ ಹರೆಯದ ಈ ಸೂಪರ್ ಸುಂದರಿ ಕೊನೆಗೂ ತನ್ನ ಗೆಳೆಯ, ರಷ್ಯಾದ ರಿಯಲ್ ಎಸ್ಟೇಟ್‌ನ ಕೋಟ್ಯಾಧೀಶ ಕುಳವಾದ ವ್ಲಾಡಿಸ್ಲಾವ್ ಡೊರೊನಿಕ್‌ನನ್ನು ಮದುವೆಯಾಗಲು ದಿನ ನಿಶ್ಚಯವಾಗಿದೆ. 22ರ ಹರೆಯದಲ್ಲಿದ್ದಾಗ ಒಮ್ಮೆ ನವೋಮಿ ಆಗಿನ ಗೆಳೆಯ 'ಯು2' ಸಂಗೀತ ತಂಡದ ಖ್ಯಾತಿಯ ಆ್ಯಡಂ ಕ್ಲೆಟನ್ ಜತೆ ಮದುವೆಯಾಗುವ ಸುದ್ದಿ ಬಂದಿತ್ತು. ಆದರೆ ಆ ಮದುವೆ ಮುರಿದು ಬಿತ್ತು. ಅಲ್ಲಿಂದೀಚೆಗೆ ಮದುವೆ ಬಗ್ಗೆ ತಲೆಯನ್ನೇ ಕೆಡಿಸಿಕೊಳ್ಳದ ಕ್ಯಾಂಪ್‌ಬೆಲ್ ಮಾಡೆಲಿಂಗ್ ಲೋಕದ ತುತ್ತ ತುದಿಗೇರಿದಳು.

ಆದರೆ ವಿವಾದಗಳಂತೂ ಆಕೆಯನ್ನು ಸದಾ ಬೆನ್ನಟ್ಟಿದವು. ಲೈಬೀರಿಯಾದ ಭೂಗತ ದೊರೆಯೊಬ್ಬ ದುಬಾರಿ ಬೆಲೆಯ ವಜ್ರದುಂಗರ ನೀಡಿದ್ದು ದೊಡ್ಡ ಸುದ್ದಿಯಾಗಿ ಕೋರ್ಟು ಮೆಟ್ಟಿಲನ್ನೂ ಹತ್ತಿತು. ಇದೀಗ ಮದುವೆ ಕೂಡಾ ವಿವಾದವಾಗುವ ಲಕ್ಷಣಗಳಿವೆ. ಬಲ್ಲ ಮೂಲಗಳ ಪ್ರಕಾರ ಈ ಮದುವೆ ನೈಲ್ ನದೀ ತೀರದ ಈಜಿಪ್ಟಿನ ಲಕ್ಸರ್ ದೇವಾಲಯದಲ್ಲಿ ನಡೆಯಲಿದೆಯಂತೆ. ಸುತ್ತ ಮುತ್ತ ಸಾವಿರಾರು ವರ್ಷಗಳಿಂದ ಮಣ್ಣೊಳಗೆ ಮಲಗಿರುವ ಮಮ್ಮಿಗಳು ಮದುವೆಯ ದಿನ ಎದ್ದು ಬರದಿದ್ದರೆ ಸಾಕು!

## ಒಬಾಮಾ ಕ್ಲಾಸ್‌ಮೇಟ್ಸ್!



ಅಮೆರಿಕಾದ ಅಧ್ಯಕ್ಷ ಬರಾಕ್ ಒಬಾಮಾ ಇತ್ತೀಚೆಗೆ ನಮ್ಮಲ್ಲಿಗೆ ಬಂದವರು ಹಾಗೆಯೇ ಇಂಡೋನೇಷ್ಯಾಗೂ ಒಂದು ರೌಂಡ್ ಹೊಡೆದಿದ್ದಾರೆ. ಅಲ್ಲಿ ಇಂಡೊನೇಷ್ಯಾ ಯೂನಿವರ್ಸಿಟಿಯಲ್ಲಿ ಒಬಾಮಾ ಭಾಷಣಕ್ಕೆ ಆತ 27 ಜನ ಪ್ರೈಮರಿ ಸ್ಕೂಲ್ ಕ್ಲಾಸ್‌ಮೇಟ್ಸ್ ವಿಶೇಷ ಅತಿಥಿಗಳಾಗಿ ಬಂದಿದ್ದರಂತೆ!

45 ವರ್ಷಗಳ ಹಿಂದೆ ಒಬಾಮಾ ಜಕಾರ್ತಾದಲ್ಲಿ ಸ್ಕೂಲ್ ಹುಡುಗನಾಗಿದ್ದ. ಆತನ ತಾಯಿ ಎರಡನೆಯ ಗಂಡನ ಜತೆ ವಾಸಿಸಲು ಹವಾಯಿಯಿಂದ ಜಕಾರ್ತಾಗೆ ವಲಸೆ ಬಂದಿದ್ದಳು. ತಾಯಿಯ ಜತೆಗೆ ಬಂದ ಒಬಾಮಾನ ಬಾಲ್ಯದ ಹೆಸರು ಬ್ಯಾರ್ರಿ. ಮೊನ್ನೆ ವಿಶ್ವವಿದ್ಯಾನಿಲಯದಲ್ಲಿ ಒಬಾಮಾ ಭಾಷಣ ಮಾಡುತ್ತಿದ್ದಾಗ ಅವನ ಕ್ಲಾಸ್‌ಮೇಟ್‌ಗಳ ಮೈ ತುಂಬ ಪುಳಕ! 'ನಾನು ಕಲಿತ ಸ್ಥಳೀಯ ಕ್ಯಾಥೊಲಿಕ್ ಶಾಲೆಯಲ್ಲಿ ಕ್ರಿಶ್ಚಿಯನ್ನರು, ಮುಸ್ಲಿಮರು ಮಾತ್ರವಲ್ಲ, ಒಬ್ಬ ಹಿಂದೂ ಹುಡುಗ ಕೂಡಾ ಇದ್ದ. ಹಾಗೆಯೇ ಆಫ್ರಿಕನ್ನರು, ಏಷ್ಯನ್ನರ ಜತೆಗೆ ಅಮೆರಿಕದವರು, ಅರಬ್ಬರು ಕೂಡಾ ಇದ್ದರು. ಬಾಲ್ಯದಲ್ಲೇ ನನಗೆ ವೈವಿಧ್ಯತೆಯಲ್ಲಿ ಏಕತೆಯ ಸೌಂದರ್ಯವನ್ನು ಕಲಿಸಿಕೊಟ್ಟ ಶಾಲೆಯದು' ಎಂದು ಒಬಾಮಾ ಭಾವ ತುಂಬಿ ಹೇಳಿದರಂತೆ! ಅಂದ ಹಾಗೆ, ಒಬಾಮಾ ಅಮೆರಿಕಕ್ಕೆ ಮರಳಿದ ಬಳಿಕ ಆತನ ಕ್ಲಾಸ್‌ಮೇಟ್‌ಗಳಿಗೆ ಜಕಾರ್ತಾದಲ್ಲಿ ಡಿಮ್ಯಾಂಡಪ್ಪೋ ಡಿಮ್ಯಾಂಡಂತೆ! ಅವರನ್ನೀಗ ಜನ ವಿಐಪಿಗಳಂತೆ ನೋಡುತ್ತಿದ್ದಾರಂತೆ!

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65